# ಋಣಮುಕ್ತ ಭಾಗ್ಯ



## ಋಣಮುಕ್ತ

### ಹೊಸ ಬದುಕಿನ ಆಶಯದತ್ತ ಮುನ್ನುಡಿ

ಬಡಜನರು ತಮ್ಮ ಹಳೆಯ ಸಾಲಗಳಿಂದ ಮುಕ್ತರಾಗಿ ಹೊಸ ಸಾಲಗಳನ್ನು ಪಡೆಯಲು ಅರ್ಹತೆ ಗಳಿಸಿ ಹೊಸ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಜೀವನ ನಡೆಸಬೇಕು ಎನ್ನುವುದು ಸರ್ಕಾರದ ಆಶಯವಾಗಿದೆ. ಇದಕ್ಕಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಮಾಡಿದ ಈ ಘೋಷಣೆ ಇಂದು ಲಕ್ಷಾಂತರ ಮಂದಿಗೆ ವರದಾನವಾಗಿದೆ. ಇದರಿಂದಾಗಿ ಪರಿಶಿಷ್ಟ ಜಾತಿ / ಪಂಗಡ ಮತ್ತು ಹಿಂದುಳಿದ ಜಾತಿ ಹಾಗೂ ಅಲ್ಪ ಸಂಖ್ಯಾತರ ಸಾಲಮನ್ನಾ ಯೋಜನೆಯಡಿ ಸುಮಾರು ಹತ್ತು ಲಕ್ಷಕ್ಕೂ ಅಧಿಕ ಮಂದಿಗೆ ಪ್ರಯೋಜನವಾಗಿದೆ. ಸರ್ಕಾರದ ಈ ಕ್ರಮವನ್ನು ರಾಜ್ಯದ ಜನತೆ ಸಹ ಮುಕ್ತವಾಗಿ ಸ್ವಾಗತಿಸಿದ್ದಾರೆ.



ಮುಖ್ಯಮಂತ್ರಿ ಹುದ್ದೆಗೆ ಏರಿದ ತಕ್ಷಣ ಸಿದ್ಧರಾಮಯ್ಯನವರು ಘೋಷಿಸಿದ ಸಾಲ ಮನ್ನಾದ ಫಲವು ಸುಮಾರು 10.18 ಲಕ್ಷ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಸಮುದಾಯಕ್ಕೆ ಸೇರಿದವರಿಗೆ ದೊರೆತಿದೆ. ಸರ್ಕಾರದ ಈ ಘೋಷಣೆಯಿಂದಾಗಿ ಅಂಬೇಡ್ಕರ್ ಅಭಿವೃದ್ಧಿ ನಿಗಮ, ದೇವರಾಜ ಅರಸು ಅಭಿವೃದ್ಧಿ ನಿಗಮ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ವಿವಿಧ ರೀತಿಯ 25 ಯೋಜನೆಗಳಡಿ ಸಾಲ ಪಡೆದುಕೊಂಡಿದ್ದವರ ಸಾಲ ಮನ್ನಾವಾಗಿದೆ. 1986 ರಿಂದೀಚೆಗೆ ಸಾಲ ಪಡೆದು, ಅಲ್ಪಸ್ವಲ್ಪ ಕಟ್ಟಿದವರೂ ಸೇರಿದಂತೆ 2013ರ ಮಾರ್ಚ್‌ವರೆಗೆ ಬಾಕಿ ಉಳಿಸಿಕೊಂಡವರಿಗೆ ಸಾಲ ಮನ್ನಾ ಉಪಯೋಗವಾಗಲಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಸುಮಾರು 25 ವರ್ಷಗಳಷ್ಟು ಹಳೆಯ ಸಾಲಗಳು ಕೂಡ ಮನ್ನಾವಾಗಿದೆ.

1.86 ಲಕ್ಷ ಮಂದಿ ಪರಿಶಿಷ್ಟ ಜಾತಿ ಫಲಾನುಭವಿಗಳು ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪಡೆದಿದ್ದ 394.47 ಕೋಟಿ ರೂ. ಹಾಗೂ 40 ಸಾವಿರ ಪರಿಶಿಷ್ಟ ಪಂಗಡದವರು ಪಡೆದಿದ್ದ 58.69 ಕೋಟಿ ರೂ. ಸಾಲ ಮನ್ನಾವಾಗಿದೆ. ದೇವರಾಜ ಅರಸು ನಿಗಮದಿಂದ 4.98 ಲಕ್ಷ ಮಂದಿ ಹಿಂದುಳಿದ ವರ್ಗದವರ 514 ಕೋಟಿ ರೂ.ಗಳ ಸಾಲ ಈ ಯೋಜನೆಯಿಂದ ಮನ್ನಾಗೊಂಡಿದೆ. ಒಟ್ಟು 362.38 ಕೋಟಿ ರೂ.ಗಳ ಸಾಲ ಪಡೆದುಕೊಂಡಿದ್ದ 2.94 ಲಕ್ಷ ಮಂದಿ ಅಲ್ಪ ಸಂಖ್ಯಾತರಿಗೆ 'ಸಾಲ ಮನ್ನಾ' ಯೋಜನೆಯಿಂದ ಪ್ರಯೋಜನವಾಗಿದೆ.

ಇತರೆ ಸಾಲ ಮನ್ನಾ: ರಾಜ್ಯದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸದಸ್ಯರು ಪಡೆದ ಅವಧಿ ಸಾಲ ವಿವಿಧ ಕಾರಣಗಳಿಗಾಗಿ 25 ವರ್ಷಗಳಿಗೂ ಮೇಲ್ಪಟ್ಟು ಸುಸ್ತಿಯಾಗಿದೆ. ಏಕಕಾಲಿಕ ಕ್ರಮವಾಗಿ ಸುಸ್ತಿಯಾಗಿರುವ ಸಾಲದ ಬಡ್ಡಿಯನ್ನು ಸಂಬಂಧಿತ ಬ್ಯಾಂಕುಗಳು ಮನ್ನಾ ಮಾಡುವ ಷರತ್ತಿಗೆ ಒಳಪಟ್ಟು ಈ ಸಾಲಗಳ ಅಸಲನ್ನು ಸರ್ಕಾರ ಮನ್ನಾ ಮಾಡುತ್ತಿದೆ. ಹಾಗೆಯೇ, ಪ್ರಸ್ತುತ ಜಾರಿಯಲ್ಲಿರುವ, ಗೃಹ ಸಹಕಾರ ಸಂಸ್ಥೆಗಳಿಂದ ಪಡೆದ 25,000 ರೂ. ಅಲ್ಪಾವಧಿ ಸಾಲಮನ್ನಾ ಯೋಜನೆಯನ್ನು ನೇಕಾರರಿಗೂ ಸರ್ಕಾರ ವಿಸ್ತರಿಸಿದೆ.

ಬಡವರ ಸಾಲವನ್ನು ಮನ್ನಾ ಮಾಡುವ ಮೂಲಕ ಸರ್ಕಾರ ಅವರಲ್ಲಿ ಹೊಸ ಚೈತನ್ಯವನ್ನು ಮೂಡಿಸುವ ಪ್ರಯತ್ನವನ್ನು ಮಾಡುತ್ತಿದೆ.

### ಸಾಲ ಮನ್ನಾ : ಯಾರಿಗೆ ಎಷ್ಟು ಲಾಭ

| ವರ್ಗ | ಸಂಖ್ಯೆ | ಮೊತ್ತ |
|---|---|---|
| ಪರಿಶಿಷ್ಟ ಜಾತಿ | 1.86 ಲಕ್ಷ ಮಂದಿ | 394.47 ಕೋಟಿ ರೂ. |
| ಪರಿಶಿಷ್ಟ ಪಂಗಡ | 0.40 ಲಕ್ಷ ಮಂದಿ | 68.69 ಕೋಟಿ ರೂ. |
| ಹಿಂದುಳಿದ ವರ್ಗ | 4.98 ಲಕ್ಷ ಮಂದಿ | 514.00 ಕೋಟಿ ರೂ. |
| ಅಲ್ಪಸಂಖ್ಯಾತರು | 2.94 ಲಕ್ಷ ಮಂದಿ | 362.88 ಕೋಟಿ ರೂ. |
| ಒಟ್ಟು | 10.18 ಲಕ್ಷ ಮಂದಿ | 1,340 ಕೋಟಿ ರೂ. |